ಭದ್ರಾ ಎಡನಾಲೆಯ ಅಚ್ಚುಕಟ್ಟು ಪ್ರದೇಶದ ಬಗ್ಗೆ

೧೯೬೪. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಕಂದಾಯ ಯೋಜನಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭದ್ರಾ ಎಡನಾಲೆಯ ೨೭ನೇಯ ಹಂಚಿಕೆಯಿಂದಾಗುವ ಅಚ್ಚುಕಟ್ಟು ಪ್ರದೇಶವೆಷ್ಟು ?

ಆ) ಸದರಿ ನಾಲೆಯಿಂದಾಗುವ ನೀರಾವರಿ ಜಮೀನಿನ ವಿಸ್ತೀರ್ಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ನೀರಾವರಿ ಸಚಿವರು).—

ಅ) ೨೨೬೫೫ ಎಕರೆ ೩೮ ಗುಂಟೆ (ಅಧಿಸೂಚನೆಯಂತೆ)

ಆ) ೪೭೨೪ ಎಕರೆ ೩೬ ಗುಂಟೆ (ವಾಸ್ತವಿಕವಾಗಿ ನೀರಾವರಿ ಆಗುತ್ತಿರುವುದು).

ಅಭಿವೃದ್ಧಿ ಪಡಿಸುತ್ತಿರುವ ಖುಷ್ಕಿ ಜಮೀನು ವಿಸ್ತೀರ್ಣದ ಬಗ್ಗೆ

೧೯೬೫. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಧಾರ್ಮಿಕ ದತ್ತಿ, ಖುಷ್ಕಿ ಭೂ ಅಭಿವೃದ್ಧಿ ಮಂಡಳಿ ಹಾಗೂ ನಿಯಂತ್ರಿತ ಮಾರುಕಟ್ಟೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಭಿವೃದ್ಧಿಪಡಿಸುತ್ತಿರುವ ಖುಷ್ಕಿ ಜಮೀನು ವಿಸ್ತೀರ್ಣವೆಷ್ಟು ? (ತಾಲ್ಲೂಕು ವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಖುಷ್ಕಿ ಜಮೀನನ್ನು ಅಭಿವೃದ್ಧಿ ಪಡಿಸಲು ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳೇನು ? (ವಿವರ ನೀಡುವುದು)

ಇ) ಈ ವರ್ಷ ಮುಂಗಾರು ಮಳೆ ಬೇಗ ಪ್ರಾರಂಭವಾಗಿದ್ದು ಮತ್ತು ರಾಜ್ಯದಲ್ಲಿ ಬಿತ್ತನೆ ಬೀಜಗಳ ಅಭಾವದಿಂದ ರೈತರಿಗೆ ಉಂಟಾಗಿರುವ ತೊಂದರೆ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಬಿತ್ತನೆ ಬೀಜಗಳನ್ನು ತ್ವರಿತವಾಗಿ ರೈತರಿಗೆ ಪೂರೈಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಅಮರನಾಥಶೆಟ್ಟಿ (ಧಾರ್ಮಿಕ ದತ್ತಿ, ಖುಷ್ಕಿ ಭೂ ಅಭಿವೃದ್ಧಿ ಮಂಡಳಿ ಹಾಗೂ ನಿಯಂತ್ರಿತ ಮಾರುಕಟ್ಟೆ ರಾಜ್ಯ ಮಂತ್ರಿಗಳು).—

ಅ) ೧೯೮೮-೮೯ನೇ ಸಾಲಿನಲ್ಲಿ ರಾಜ್ಯದಲ್ಲಿ ೨,೨೯,೫೫೫ ಹೆಕ್ಟೇರು ಖುಷ್ಕಿ ಜಮೀನನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ತಾಲ್ಲೂಕುವಾರು ವಿವರಗಳ ಪಟ್ಟಿಯನ್ನು ಸದನದ ಮೇಜಿನ ಮೇಲೆ ಇಡಲಾಗಿದೆ.

ಆ) ರಾಜ್ಯದಲ್ಲಿ ಖುಷ್ಕಿ ಭೂಮಿಯನ್ನು ಅಭಿವೃದ್ಧಿಪಡಿಸಲು ಈ ಕೆಳಗೆ ನಮೂದಿಸಿದ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ.

೧) ಕೇಂದ್ರ ಪುರಸ್ಕೃತ ಯೋಜನೆಯ ಸಣ್ಣ ಮತ್ತು ಅತಿ ಸಣ್ಣ ರೈತರ ಕೃಷಿ ಉತ್ಪನ್ನ ಹೆಚ್ಚಿಸುವ ಮಳೆ ಆಶ್ರಯ ಬೇಸಾಯ ಅಭಿವೃದ್ಧಿ ಯೋಜನೆ.

೨) ಕೇಂದ್ರ ಪುರಸ್ಕೃತ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ.

೩) ಕೇಂದ್ರ ಪುರಸ್ಕೃತ ನದಿ ಕಣಿವೆ ಯೋಜನೆ.

೪) ವಿಶ್ವ ಬ್ಯಾಂಕಿನ ಸಹಾಯದಲ್ಲಿ ಕಬ್ಬಾಳ ನಾಲಾ ಜಲಾನಯನ ಅಭಿವೃದ್ಧಿ ಯೋಜನೆ.

೫) ಪರಿಶಿಷ್ಟ ಜಾತಿ ರೈತರ ಖುಷ್ಕಿ ಭೂ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆ.

೬) ಪರಿಶಿಷ್ಟ ಪಂಗಡ ರೈತರ ಖುಷ್ಕಿ ಭೂ ಅಭಿವೃದ್ಧಿಗಾಗಿ ಬುಡಕಟ್ಟು ಉಪ ಯೋಜನೆ